ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಮನಸ್ಸಿನಲ್ಲಿ ಒಂದು ಸಂಶಯ ಇದೆ. ಪ್ರತಿಯೊಂದು ತಾಲ್ಲೂಕಿನಲ್ಲೂ ೧೦ ಜನರಂತೆ ಗ್ರಾಮ ಸೇವಕರು ಇರಬೇಕೆಂದು ನಾವು ಮಾಡಿದೆವು. ಈ ಗ್ರಾಮ ಸೇವಕರನ್ನು ಯಾರು ಬೇಕೆಂದು ಕೇಳುತ್ತಾರೆ ಅವರಿಗೆ ಹೊಸದಾಗಿ ನೇಮಕ ಮಾಡಿದ್ದೇವೆ, ಆದರೆ ಇವರನ್ನು ಗ್ರಾಮೀಣ ಅಭಿವೃದ್ಧಿ ಇಲಾಖೆಯಲ್ಲಿ ನೇಮಕ ಮಾಡ ಲಾಗಿತ್ತು. ಈಗ ನಾವು ಇವರನ್ನು ವಾಪಸು ತೆಗೆದುಕೊಂಡಾಗ ಕೆಲವು ಜಿಲ್ಲೆಗಳಲ್ಲಿ ಹೆಚ್ಚಿಗೆ ಇದ್ದಾರೆ, ಇನ್ನು ಕೆಲವು ಜಿಲ್ಲೆಗಳಲ್ಲಿ ಕಡಿಮೆ ಇದ್ದಾರೆ. ವ್ಯವಸಾಯ ಇಲಾಖೆಯಲ್ಲಿ ಯಾರ ನೇಮಕಾತಿ ಆಗಿದೆ ಅಂಥವರನ್ನು ನಾವು ವಾಪಸು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಆದರೆ ಗ್ರಾಮೀಣ ಅಭಿವೃದ್ಧಿ ಇಲಾಖೆಯಲ್ಲಿ ಯಾರಿದ್ದಾರೆ ಅವರನ್ನು ಮಾತ್ರ ನಾವು ವಾಪಸು ತೆಗೆದುಕೊಳ್ಳುವುದಕ್ಕೆ ಸಾಧ್ಯತೆ ಇದೆ.

ಅಥಣಿ ವಿಧಾನ ಸಭಾ ಕ್ಷೇತ್ರದಲ್ಲಿರುವ ಏಕೋಪಾಧ್ಯಾಯ ಶಾಲೆಗಳ ಬಗ್ಗೆ

೨೩೫ (೩೨೫) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ :—

ಅ) ಅಥಣಿ ಕ್ಷೇತ್ರದಲ್ಲಿ ಇರುವ ಏಕೋಪಾಧ್ಯಾಯ ಶಾಲೆಗಳ ಸಂಖ್ಯೆ ಎಷ್ಟು?

ಆ) ಮೇಲಿನ ಎಲ್ಲಾ ಶಾಲೆಗಳಲ್ಲಿ ಉಪಾಧ್ಯಾಯರುಗಳು ಇರುವರೇ?

ಇ) ಇಲ್ಲವಾದಲ್ಲಿ ಶಿಕ್ಷಕರುಗಳಿಲ್ಲದ ಶಾಲೆಗಳು ಎಷ್ಟು ?

ಶ್ರೀ ಹೆಚ್.ಜಿ. ಗೋವಿಂದಗೌಡ (ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ) ೫೬.

ಆ) ಆರು ಶಾಲೆಗಳಲ್ಲಿ ಉಪಾಧ್ಯಾಯರುಗಳು ಇಲ್ಲ.

ಇ) ಈ ಹುದ್ದೆಗಳಿಗೆ ಉಪಾಧ್ಯಾಯರುಗಳನ್ನು ನಿಯೋಜಿಸಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಸ್ವಾಮಿ ಸಿಂಗಲ್ ಟೀಚರ್ಸ್ ಸ್ಕೂಲ್‌ಗಳನ್ನು ಡಬಲ್ ಟೀಚರ್ಸ್ ಸ್ಕೂಲ್‌ಗಳನ್ನಾಗಿ ಮಾಡುತ್ತೇವೆಂದು ಕಳೆದ ಸಾರಿ ಹೇಳಿದ್ದೀರಿ. ಅದನ್ನು ಈ ವರ್ಷದಲ್ಲೇ ಮಾಡುತ್ತೀರಾ ?

ಶ್ರೀ ಹೆಚ್.ಜಿ. ಗೋವಿಂದಗೌಡ.—ಸಿಂಗಲ್ ಟೀಚರ್ಸ್ ಸ್ಕೂಲ್‌ಗಳನ್ನು ಡಬಲ್ ಟೀಚರ್ಸ್ ಸ್ಕೂಲುಗಳನ್ನಾಗಿ ಈ ಮಾಡುವುದಕ್ಕಾಗುವುದಿಲ್ಲ. ೬ ಶಾಲೆಗಳಲ್ಲಿ ಉಪಾಧ್ಯಾಯರುಗಳೇ ಇಲ್ಲವೆಂದು ನಾನು ಉತ್ತರದಲ್ಲಿ ತಿಳಿಸಿದ್ದೇನೆ. ಈಗ ಎಲ್ಲೆಲ್ಲಿ ಹೆಚ್ಚು ಉಪಾಧ್ಯಾಯರು ಇದ್ದಾರೆ ಅಂಥವರನ್ನು ಕಡಿಮೆ ಇರತಕ್ಕ ಶಾಲೆಗಳಿಗೆ ವರ್ಗ ಮಾಡಿದ್ದೇವೆ. ಇನ್ನೂ ಸಾಲದು ಎನ್ನುವುದಾದರೆ, ಅಂಥ ಕಡೆ ಗಳಿಗೆ ಗುತ್ತಿಗೆ ಆಧಾರದ ಮೇಲೆ ಉಪಾಧ್ಯಾಯರುಗಳನ್ನು ತೆಗೆದುಕೊಳ್ಳತಕ್ಕ ವ್ಯವಸ್ಥೆ ಮಾಡುತ್ತೇವೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಈಗ ಕೆಲವು ಕಡೆಗಳಲ್ಲಿ ಉಪಾಧ್ಯಾಯರುಗಳನ್ನು ಬೇರೆ ಬೇರೆ ಕಡೆಗಳಿಗೆ ಡೆಪ್ಯುಟೇಷನ್ ಕಳುಹಿಸಿದ್ದೀರಿ. ಅವರು ಅಲ್ಲಿಯೂ ಕೆಲಸ ಮಾಡುತ್ತಿಲ್ಲ, ಮತ್ತು ಇಲ್ಲಿಯೂ ಕೆಲಸ ಮಾಡುತ್ತಿಲ್ಲ. ಕಳೆದ ಎರಡು ವರ್ಷದಿಂದ ಸಿಂಗಲ್ ಟೀಚರ್ಸ್ ಸ್ಕೂಲ್ ಗಳನ್ನು ಡಬಲ್ ಟೀಚರ್ಸ್ ಸ್ಕೂಲ್‌ಗಳನ್ನಾಗಿ ಮಾಡುತ್ತೇವೆಂಬು ಹೇಳುತ್ತಲೇ ಇದ್ದೀರಿ. ಇದರ ಬಗ್ಗೆ ಕ್ರಮ ತೆಗೆದುಕೊಂಡು ಈ ವರ್ಷವೇ ಇನ್ನೊಬ್ಬರು ಉಪಾಧ್ಯಾಯರನ್ನು ಕೊಡುತ್ತೀರಾ ?

ಶ್ರೀ ಹೆಚ್.ಜಿ. ಗೋವಿಂದಗೌಡ.—ಇದೇ ವರ್ಷದಲ್ಲೇ ಮಾಡುತ್ತೇವೆಂದು ನಾವು ಆಶ್ವಾಸನೆ ಕೊಡುವುದಕ್ಕಾಗುವುದಿಲ್ಲ. ಸರ್ಕಾರದವರು ಈ ಬಗ್ಗೆ ಯೋಚನೆ ಮಾಡುತ್ತೇವೆ. ಆದಷ್ಟು ಬೇಗ ಈ ಕೊರತೆಯನ್ನು ನಿವಾರಿಸಬೇಕೆಂಬ ಉದ್ದೇಶದಿಂದ ಗುತ್ತಿಗೆ ಆಧಾರದ ಮೇಲೆ ೩೦೦ ಜನ ಉಪಾಧ್ಯಾಯರನ್ನು ನೇಮಕ ಮಾಡಿಕೊಂಡು ಅವಶ್ಯಕತೆ ಇರುವ ಕಡೆಗಳಿಗೆ ಅವರನ್ನು ಕಳುಹಿಸಿ ಕೊಡುತ್ತೇವೆ.